For more job news visit : www.kpscvaani.com

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್. ಚೌಕ, ಬೆಂಗಳೂರು-560002

ಸಂಖ್ಯೆ: ಮು.ಆ.ಅ(ಸಾ.ಆ)/ಪಿಆರ್/ಪಿ-90-3/2024-25 ದಿನಾಂಕ: 13.06.2024

## ಪ್ರಕಟಣೆ

ಪಾಲಿಕೆ ವ್ಯಾಪ್ತಿಯ **"ನಮ್ಮ ಕ್ಲಿನಿಕ್"**ಗಳಲ್ಲಿ ಕರ್ತವ್ಯ ನಿರ್ವಹಿಸಲು ವೈದ್ಯಾಧಿಕಾರಿಗಳು, ಶುಶ್ರೂಷಕಿ / ಶುಶ್ರೂಷಕರು ಮತ್ತು ಪ್ರಯೋಗಶಾಲಾ ತಂತ್ರಜ್ಞರು ಹುದ್ದೆಗೆ 01 ವರ್ಷದ ಅವಧಿಗೆ ಸಂಪೂರ್ಣ ನೇರ ಗುತ್ತಿಗೆ ಆಧಾರದ ಮೇಲೆ ಈ ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ ಖಾಲಿ ಇರುವಂತಹ ಸಂಖ್ಯೆಗಳಿಗೆ ಹಾಗೂ ಮುಂದಿನ ದಿನಗಳಲ್ಲಿ ಖಾಲಿಯಾಗುವ ಹುದ್ದೆಗಳು ಭರ್ತಿಯಾಗುವವರೆಗೂ ನೇಮಕಾತಿ ಮಾಡಿಕೊಳ್ಳಲು ಆಸಕ್ತಿವುಳ್ಳ ಅಭ್ಯರ್ಥಿಗಳಿಂದ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಗರಿಷ್ಠ ವಯೋಮಿತಿ (ಎನ್.ಹೆಚ್.ಎಂ. ಮಾರ್ಗಸೂಚಿ) | ವಿದ್ಯಾರ್ಹತೆ | ಸಂಚಿತ ವೇತನ ಪ್ರತಿ ಮಾಹೆಯಾನ |
|---|---|---|---|---|
| 1 | ವೈದ್ಯಾಧಿಕಾರಿಗಳು | 65 | ಎಂಬಿಬಿಎಸ್ ಪದವಿಯೊಂದಿಗೆ ಕೆ.ಎಂ.ಸಿ. ನೋಂದಾವಣಿ. | 47,250/- |
| 2 | ಶುಶ್ರೂಷಕಿ / ಶುಶ್ರೂಷಕರು | 45 | ಬಿ.ಎಸ್.ಸಿ. / ಡಿಪ್ಲೋಮಾ ಇನ್ ನರ್ಸಿಂಗ್ ವಿದ್ಯಾರ್ಹತೆಯೊಂದಿಗೆ ಮತ್ತು ಕೆ.ಎನ್.ಸಿ ಕೌನ್ಸಿಲ್ ನೋಂದಾವಣಿ ಹೊಂದಿರಬೇಕು. | 18,714/- |
| 3 | ಪ್ರಯೋಗಶಾಲಾ ತಂತ್ರಜ್ಞರು | 40 | ಡಿಪ್ಲೋಮಾ ಇನ್ ಪ್ರಯೋಗಶಾಲಾ ತಂತ್ರಜ್ಞಾನ (ಡಿ.ಎಂ.ಎಲ್.ಟಿ) / ಬಿಎಸ್ಸಿ ಲ್ಯಾಬ್ ಟೆಕ್ನೀಷಿಯನ್‌ನೊಂದಿಗೆ ಕರ್ನಾಟಕ ಸರ್ಕಾರ ಪ್ಯಾರಾಮೆಡಿಕಲ್ ಮಂಡಳಿಯ ನೋಂದಣಿ ಹೊಂದಿರಬೇಕು. | 18,465/- |

ಆಸಕ್ತ ಅಭ್ಯರ್ಥಿಗಳು ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳು ಮತ್ತು ಒಂದು ಜೆರಾಕ್ಸ್ ಪ್ರತಿ, ಭಾವಚಿತ್ರದೊಂದಿಗೆ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)ರವರ ಕಛೇರಿ, #304, ಅನೆಕ್ಸ್-3 ಕಟ್ಟಡ, 3ನೇ ಮಹಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು-560 002 ವಿಳಾಸಕ್ಕೆ ಖುದ್ದಾಗಿ ಅರ್ಜಿ ಸಲ್ಲಿಸಲು ಕೋರಿದೆ.

**ಸೂಚನೆ: ಮೊದಲು ಬಂದವರಿಗೆ ಮೊದಲ ಆದ್ಯತೆ.**

ಸಹಿ/- ಮುಖ್ಯ ಆರೋಗ್ಯಾಧಿಕಾರಿ (ಸಾ.ಆ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ